# ಕಾನನ

ಜೂನ್ 2015

ನಿಸರ್ಗದೆಡೆಗೆ ಪಯಣ



BANNERUGHATTA

**WILDLIFE CONSERVATION GROUP**

# ಕಾನನ

ನಿಸರ್ಗದೆಡೆಗೆ ಪಯಣ



ಜೂನ್ 2015

WILDLIFE CONSERVATION GROUP



* ಪರ್ಗುಲೇರಿಯ ಬಳ್ಳಿ
* ಮೀಸೆಮಾಮ
* ಅಮ್ಮನ ತ್ಯಾಗ
* ಓ ನನ್ನ ಪುಟ್ಟ ಗುಬ್ಬಿ
* ಪ್ರಕೃತಿ ಬಿಂಬ


ಲೇಖಕರ ವೃಂದ

ಮಮತ .ಆರ್

ಅಶ್ವಥ .ಕೆ.ಎನ್

ರವಿಚಂದ್ರ .ಎಸ್.ವಿ

ಶಂಕರಪ್ಪ .ಕೆ.ಪಿ

ಕಾರ್ತಿಕ್ .ಎ.ಕೆ

ವಿನ್ಯಾಸ

ಅಶ್ವಥ .ಕೆ.ಎನ್

ಛಾಯಾಚಿತ್ರಗಳು

ಕಾರ್ತಿಕ್ .ಎ.ಕೆ



# ಪರ್ಗುಲೇರಿಯ ಬಳ್ಳಿ

**ವೈಜ್ಞಾನಿಕ ಹೆಸರು :** *Pergularia daemia*


**ಇಂಗ್ಲೀಷ್ ಹೆಸರು :** Trellis Vine

ನಾನು ಗೆಳೆಯರರೊಂದಿಗೆ ಶಾಲೆಯ ಕಡೆಗೆ ನಡೆದುಕೊಂಡು ಹೊರಟಾಗ ರಸ್ತೆಯ ಬದಿಗೆ ಎರಡು ಕಡೆ ಬೆಳೆದಿರುವ ಕೆಂಪು, ನೇರಳೆ, ಅರಶಿನ, ಬಿಳಿ ಮುಂತಾದ ಬಣ್ಣ ಬಣ್ಣದ ಹೂಗಳನ್ನ ನೋಡುತ್ತಾ ಆ ಸುಂದರ ಹಸಿರು ಕಾನನದ ನಡುವೆ ಹೊರಡಬೇಕಾದರೆ ಆಗಾಗ ಕೆಲ ವಾಹನಗಳು ಎದುರಿಗೆ ಬಂದು ಆ ಮೌನ ಕಾನನವನ್ನು ಕದಡಿ ಹಾಳು ಮಾಡಿ ಹೋಗುತ್ತಿದ್ದವು, ಮನಸ್ಸಿಗೆ ಬೇಸರವಾಗುತ್ತಿತ್ತು. ಮತ್ತೆ ಹೂಗಳ ಸುಂದರ ಲೋಕದಲ್ಲಿ ಮುಳಗಿ ಬಗೆ ಬಗೆಯ ಹೂಗಳನ್ನು ನೋಡುತ್ತಾ . . . ನಡೆಯುತ್ತಿದ್ದೇವು. ಆದರೆ ಬೇಲಿಯ ಮೇಲೆ ಹೆಚ್ಚು ಹೆಚ್ಚು ಬಿಳಿಯ ಹೂವುಗಳು ಕಾಣುತ್ತಿದ್ದವು. ಅದು ಒಂದು ಬಿಳಿ ತೆಳುವಾದ ಪದರದ ಹೃದಯಕಾರದ ಎಲೆಗಳ ಗುಚ್ಚ ಗುಚ್ಚ ಬಿಳಿ ಬಿಳಿ ಬಣ್ಣದ್ದು ರಸ್ತೆಯ ಎರಡು ಬದಿಯ ಬೇಲಿಯ ಮೇಲೆಲ್ಲಾ ಹರಡಿಕೊಂಡು ಸಾವಿರಾರು ಹೂಗಳು ಕಂಗೊಳಿಸುತ್ತಿದ್ದವು, ಈ ಹೂ ಯಾವ ಹೂ ಎಂದು ನಮಗೆ ತಿಳಿಯಲ್ಲಿಲ್ಲ, ಫೋಟೊ ತೆಗೆದುಕೊಂಡು ಅಂತರ ಜಾಲದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಜಾಲ ತಾಣ 'ಡಿಜಿಟಲ್ ಫ್ಲೊರ್ ಆಫ್ ಕರ್ನಾಟಕ'ದಲ್ಲಿ ನೋಡಿದಾಗ ಆ ಸಸ್ಯ ಹಾಲುಕೊರಟಿಗೆ (Trellis vine) ಎಂದು ತಿಳಿಯಿತು. ಅದನ್ನು ಕನ್ನಡದಲ್ಲಿ ಜುಟ್ಟುವೆ, ತಲವರನ ಬಳ್ಳಿ, ಬಿಳಿಹತ್ತಿ ಬಳ್ಳಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.



ಈ ಪರ್ಗುಲೇರಿಯ ಸಸ್ಯದ ಮೂಲ ಮಲೆಯಾದಿಂದ ಬರ್ಮ, ಇಂಡಿಯಾ, ಶ್ರೀಲಂಕಾಗಳಲೆಲ್ಲಾ ಹರಿದಾಡುತ್ತಿದೆ. ಕಾಂಡ ಮತ್ತು ಎಲೆಯನ್ನು ಕಿತ್ತರೆ ಹಾಲಿನಂತಹ ದ್ರವದಿಂದ ಕೂಡಿರುತ್ತದೆ ಮತ್ತು ಮೃದುವಾದ ಕೂದಲುಗಳನ್ನು ಹೊಂದಿರುತ್ತದೆ. ಕಾಯಿಗಳು ಹಸಿರು ಮೃದುವಾದ ಮುಳ್ಳುಗಳಿಂದ ಕೂಡಿರುತ್ತದೆ, ಬಲಿತ ಕಾಯಿಗಳು ಹತ್ತಿಯಂತೆ ಗಾಳಿಯಲ್ಲಿ ಬೀಜ ಪ್ರಸಾರವಾಗುತ್ತವೆ. ಇದು ಔಷದಿಯ ಸಸ್ಯವೂ ಕೂಡ ನಾಟಿ ಔಷದಿಯಲ್ಲಿ ಬಳಸುತ್ತಾರೆ ಯಕೃತ್ತಿನ ಕಾಯಿಲೆ (ಲಿವೆರ್ ಡಿಸಾರ್ಡರ್)ಗಳಿಗೆ ಈ ಪರ್ಗುಲೇರಿಯ ಸಸ್ಯವನ್ನು ಬಳಸಲಾಗುತ್ತದೆ.

- ಮಮತ .ಆರ್



# ಮೀಸೆಮಾಮ

ಈ ಹಿಂದೆ ನಿಮಗೆ ಆಶ್ರಮ ತೋಟದ ಮನೆಯ ಪರಿಚಯ ಇದ್ದೆ ಇದೆ, ಹಿಂದೆ ಸೀಬೆ ಮರದ ಕಥೆ ಹೇಳಬೇಕಾದರೆ ಹೇಳಿದ್ದೆನೆ. ಅದೆ ಮನೆಯ ಮುಂದೆ ಒಂದು ದೈತ್ಯ ಮುಳ್ಳು ಬೂರುಗದ ಮರ ಎತ್ತರಕ್ಕೆ ಬೆಳೆದು ನಿಂತಿದೆ. ಸುಮಾರು ನೂರು ವರ್ಷದ ಮರ, ಈ ಬೂರುಗದ ಮರ ನೂರು ವರ್ಷದಲ್ಲಿಯೇ ಹೆಮ್ಮರವಾಗಿ ಬೆಳೆದು ನಿಂತಿದೆ. ಬೇಸಿಗೆ ಬಂದಿತ್ತೆದಂರೆ ತನ್ನ ಎಲ್ಲಾ ಎಲೆಗಳನ್ನು ಉದುರಿಸಿ ಕೆಂಪನೇಯ ಸಾವಿರಾರು ಹೂವುಗಳನ್ನು ಶೃಂಗರಿಸುತ್ತವೆ. ಹೂವಿನಲ್ಲಿ ಮಕರಂದವನ್ನು ಹೀರಲು ಮೈನಾ, ಸೂರಕ್ಕಿ, ಬೆಳ್ಳಗಣ್ಣ, ಮತ್ತು ಕಾಜಾಣಗಳು ಮುಗಿಬಿದ್ದು ನಮ್ಮ ಮನೆಯ ಪಕ್ಕದಲ್ಲಿಯೇ ಪ್ರೈಮರಿ ಶಾಲೆಯ ಮಕ್ಕಳು ಕಿರುಚಿ-ಕೂಗಾಡಿ ಗಲಾಟೆ ಮಾಡುವಂತೆ ಕಿರುಚಾಡುತ್ತವೆ. ಇನ್ನೂ ಹೂವು ಬಿಟ್ಟು ಮುಗಿದ ಮೇಲೆ ಕಾಯಿಬಿಡುವ ಕಾಲ ಶುರುವಾಗುತ್ತದೆ, ಹಾಗ ಅಳಿಲು-ಕೋತಿಗಳ ಸರದಿ!, ಈ ಅಳಿಲು-ಕೋತಿಗಳು ಅಷ್ಟೇನೂ ಗಲಾಟೆ ಮಾಡುವುದಿಲ್ಲ ಆದರೆ ಕಾಯಿಯ ಒಳಗಡೆ





ಬೀಜಗಳನ್ನು ಬಿಡಿಸಿ ತಿಂದು ಉಳಿದ ಸಿಪ್ಪೆಗಳನ್ನು, ಹತ್ತಿಯನ್ನು ಗಾಳಿಯಲ್ಲಿ ತೂರಿಬಿಟ್ಟು ಮನೆಯ ಮುಂದೆಯೆಲ್ಲ ಗಲೀಜು ಮಾಡುತ್ತವೆ. ನಮ್ಮ ಮನೆಯ ಪಕ್ಕದಲ್ಲಿರುವ ನಮ್ಮ ಪ್ರೈಮರಿ ಶಾಲೆಯ ಹೆಡ್ಮೆಸ್ಟರಿನ ಹೆಂಡತಿ ದಿನಾಲೂ ಮನೆಯ ಮುಂದೆ ಗುಡಿಸಿ ಶುಚ್ಚಿಮಾಡುವ ಕೆಲಸವನ್ನು ಕಾಯಂ ಮಾಡಿರುವ ಕೀರ್ತಿ ಈ ಅಳಿಲು-ಕೋತಿಗಳಿಗೆ ದಕ್ಕಬೇಕು. . .!

ಇನ್ನೂ ವಾರಂತ್ಯ ಬಂದರೆ ಬೆಂಗಳೂರಿನಿಂದ ಬರುವ ಗೆಳೆಯರು ಅಳಿಲು-ಕೋತಿ ಮೈನಾ, ಸೂರಕ್ಕಿ ಮತ್ತು ಕಾಜಾಣ ಹಕ್ಕಿಗಳ ಪೋಟೋ ತೆಗೆಯುವಲ್ಲಿ ಬೆವರು ಸುರಿಸಿ ಕತ್ತಲಾಗುವತನಕ ದುಡಿಯುತ್ತಾರೆ. ಮತ್ತೆ ಸುಸ್ತಾಗಿ ಸೋಮವಾರ ತಮ್ಮ ತಮ್ಮ ಕಂಪನಿಗಳ ಕೆಲಸಗಳಲ್ಲಿ ಬ್ಯೂಸಿಯಾಗಿ ಬಿಡುತ್ತಾರೆ.

ಒಮ್ಮೆ ನನ್ನ ರೂಮಿನಲ್ಲಿ ಕುಳಿತು ರಿಮೋಟ್ ಸೆನ್ಸಿಂಗ್ ಬಗ್ಗೆ ಓದುತ್ತಾ ಕುಳಿತ್ತಿದೆ, ಪಕ್ಕದ ರೂಮಿನಲ್ಲಿ ತೋಟದ ಸುರೇಶಣ್ಣ ಟಿ.ವಿ ಯಲ್ಲಿ ಯಾವುದೋ ಕನ್ನಡ ಸಿನಿಮಾ ನೋಡುತ್ತಿದರು ಇದ್ದಕಿದ್ದಾಗೆ ಮನೆಯ ಮೇಲೆಯೇ ಲಟಲಟ ಡಂ. . .ಎಂಬ ಶಬ್ಧಬಂದು ಮನೆಯ ಬಾಗಿಲು, ಕಿಟಕಿಗಳೆಲ್ಲ ಅಲುಗಾಡಿ ತೋಟದ ಸುರೇಶಣ್ಣ ಅಡುಗೆ ಮನೆಯಲ್ಲಿ ಜೋಡಿಸಿದ ಪಾತ್ರೆ ಸಾಮಾನುಗಳು ಉದುರಿ ಮನೆಯಲ್ಲೇಲ್ಲ ಚಲ್ಲಾಪಿಲ್ಲಿಯಾಗಿ ಪಾತ್ರೆಗಳು ಶಬ್ಧದ ಜೋತೆಯಲ್ಲಿಯೇ "ಅಯ್ಯೋಯ್ಯೋ. . .ಭೂಕಂಪ. . .ಭೂಕಂಪ. . .ಎನ್ನುತ್ತಾ ಸುರೇಶಣ್ಣ ಹೊರಗೆ ಹೋಡಿ ಬಂದರು, ನಾನು ಪುಸ್ತಕ ಬಿಸಾಡಿ ಹೋರ ಹೋಡಿದೆ!, ಹೊರಗೆ ಹೋಗಿ ನೋಡಿದರೆ ಬೂರುಗದ ಧೈತ್ಯ ಮರ ಮನೆ ಮೇಲೆ ಆರಾಮವಾಗಿ ಮಲಗ್ಗಿತ್ತು.

ನಮಗೆ ಇಷ್ಟು ದಿನ ಬೂರುಗ ಮರದ ಹೊರಗಡೆ ಅಳಿಲು-ಕೋತಿ, ಹಕ್ಕಿಗಳಲ್ಲಿ ನಡೆಯುತ್ತಿದ್ದ ನಾಟಕ ಮಾತ್ರ ಗೊತ್ತಿತ್ತೇ! ವಿನಹ ಮರದ ಒಳಗೆ ನಡೆಯುತ್ತಿದ್ದ ನಾಟಕ ನಿಜವಾಗಿ ನಮಗೆ ಗೊತ್ತಿರಲ್ಲಿಲ್ಲ. ಗಾಳಿ ಇಲ್ಲ! ಮಳೆ ಇಲ್ಲ! ಈ ಬೂರುಗದ ಮರ ಹೇಗೆ ನೆಲಕ್ಕೂರುಳಿತು? ಎಂಬ ಸಂಶಯದಲ್ಲಿ



ಮರದಬಳಿ ಹೋಗಿ ಮುರಿದ ಜಾಗ ನೋಡಬೇಕಾದರೆ ಒಂದು ದಿನ ಬೂರುಗಮರದ ಬಳಿ ATREE ಸಂಸ್ಥೆಯಲ್ಲಿ ಕೀಟತಜ್ಞರಾಗಿ ಕೆಲಸಮಾಡುವ ಗೆಳೆಯರಾದ ಡಾ.ಪ್ರೀಯದರ್ಶನ್ ರವರು ಯಾವುದೋ ಒಂದು ಕೀಟವನ್ನು ಪೋಟೋ ತೆಗೆಯುತ್ತಿದ್ದದ್ದು ನೆನಪಿಗೆ ಬಂದು ಹಾಗೆ ಗಮನಿಸಿದೆ ಬೂರುಗ ಮರದ ತೊಗಟೆ ಒಣಗಿ ಕಳಚಿ ಕೆಳಗೆ ಬಿದ್ದಿತ್ತು. ಮರದ ಬುಡದ ಮೇಲೆ ನೂರಾರು ತೂತುಗಳು ಬಿದ್ದಿದ್ದವು.

ಯಾವುದೋ ಕೀಟಗಳದ್ದೆ ಈ ಕೆಲಸ ಇರಬಹುದು ಎಂದುಕೊಂಡು. ಡಾ.ಪ್ರೀಯದರ್ಶನ್ ರವರಿಗೆ ಪೋನ್ ಮಾಡಿದೆ. ನಮ್ಮ ಮನೆಯ ಮುಂದೆ ಇರುವ ಮುಳ್ಳು ಬೂರುಗ ಮರವನ್ನು ನೀವೂ ನೋಡಿದ್ದಿರಾ? ಎಂದು ಕೇಳಿದೆ. "ಎಲ್ಲಿ?, ನನಗೆ ನೆನಪಿಲ್ಲವಲ್ಲ" ಎಂದರು ಅವರು. ಅಂದು ಒಂದು ಕೀಟವನ್ನು ಪೋಟೋ ತೆಗೆಯುತ್ತಿದ್ದಿದ್ದು, ಆ ಕೀಟಕ್ಕೆ ಉದ್ದನೆಯ ಮೀಸೆಗಳು ಇದ್ದದ್ದು ರೆಕ್ಕೆಯ ಮೇಲೆ ಕೆಂಪು ಕೆಂಪು ಚುಕ್ಕೆಗಳಿದ್ದಿದ್ದು ಎಲ್ಲವನ್ನು ಹೇಳಿದೆ. ಅವರಿಗೆ ಮರದ ಜಾಗ ತಿಳಿಯಿತು. "ಹೋ. . .ಆ ಮರವಾ? ಗೊತ್ತಾಯಿತು. ಏನೂ ಸಮಾಚಾರ ಆ ಮರ ಮುರಿದು ಬಿದ್ದುಹೋಯಿತ್ತಾ" ಎಂದು ಅವರೆ ನನಗೆ ಕೇಳಿದರು. ನನಗೆ ಆಶ್ಚರ್ಯ ಇವರಿಗೆ ಹೇಗೆ ತಿಳಿಯಿತು ಮರ ಬಿದ್ದದ್ದು. ನಾನು ಏನೂ ಹೇಳೆಯಿಲ್ಲವಲ್ಲ ಅಂದುಕೊಳ್ಳುವಷ್ಟರಲ್ಲಿ ಈ ಕೀಟಗಳ ಪರಿಕ್ರಮವನ್ನು ನನ್ನ ಬಳಿ ಬಿಚ್ಚಿಟ್ಟರು. ಈ ಕೀಟದ ಹೆಸರು "Red-Spotted Longhorn Beetle (Batocera rufomaculata)" ಎಂದು. ಇವು ಲಾರ್ವೆ ಸ್ಥಿತಿಯಲ್ಲಿದಾಗ ಮರದ ಖಂಡವನ್ನೇ ಕೊರೆದು ಮರದ ಪುಡಿಯನ್ನೇ ತಿಂದು ಬದುಕುವ ಈ ಕೀಟಗಳು. ಅಲ್ಲಿಯೇ ಊಟ, ಮನೆ-ಮಠ, ಸಂಸಾರ, ಮಕ್ಕಳು ಎಲ್ಲವನ್ನು ಮಾಡುತ್ತವೆ. ಬೂರುಗದಂತಹ ಮೆದು ಮರಗಳ ಬುಡದಲ್ಲಿ ಆಹಾರಕಾಗಿ ಕೊರೆಯಲು ಶುರುಮಾಡಿ. ಇಡೀ ಮರದ ಖಂಡವನ್ನು ಕೊರೆದು ಕೊನೆಗೊಂದು ದಿನ ಮರವನ್ನು ನೆಲಕುರುಳಿಸುತ್ತವೆ. ಎಂದು ವಿವರಿಸಿದರು.

ಮತ್ತೆ ಇನೊಬ್ಬ ಗೆಳೆಯರಾದ ಹರಿಹರನ್ ರವರು ಇದೆ ಮರದಲ್ಲಿ ನಾಲ್ಕೈದು ಸಾರಿ ಮರಕುಟಿಗಗಳನ್ನು ಪೋಟೋ ತೆಗೆಯುತ್ತಿದ್ದದ್ದು ನೆನಪಿಗೆ ಬಂತು ಬೂರುಗ ಮರದ ಬಳಿ ಈ ಮರಕುಟಿಗಗಳ ಕೆಲಸವೇನಿರಬಹುದು? ಎಂಬ ಸಂಶಯ ಬಂತು. ಸಾಮಾನ್ಯವಾಗಿ ಈ ಮೀಸೆಮಾಮನ "Red-Spotted Longhorn Beetle (Batocera rufomaculata)" ಲಾರ್ವೆಗಳನ್ನು ಹಿಡಿದು ತಿನ್ನಲು ಈ ಮರಕುಟಿಗಗಳು ಬಂದು ಮರದ ಖಂಡವನ್ನು ಕುಟ್ಟಿಕುಟ್ಟಿ ಹೆಕ್ಕಿ ತಿನ್ನುತ್ತಿದ್ದವು, ನೂರಾರು ಲಾರ್ವೆಗಳನ್ನು ಹಿಡಿದು ತಿಂದರೂ ಈ ಮರಕುಟಿಗಗಳು ಕೊನೆಗೂ ಬೂರುಗ ಮರವನ್ನು ಉಳಿಸಿಕೊಳ್ಳಲೂ ಸದ್ಯವಾಗಿಲ್ಲ.

- ಅಶ್ವಥ .ಕೆ.ಎನ್

# ಅಮ್ಮನ ತ್ಯಾಗ



ಪ್ರಾಣಿ ಪ್ರಪಂಚದಲ್ಲಿ, ಮಾನವನ ತರಹ ಅಮ್ಮನಾಗುವುದು ತುಂಬಾ ಸುಲಭವಾದ ಕೆಲಸವಲ್ಲ. ಅಂಕಣಗಾರ್ತಿ ಲಾರ ಸಾಂಡೆರ್ಸ್ ರವರ ಹೊಮೋ ಸೆಪಿಯನ್ ಗಳು ತಾಯಿಯಾಗುವ ಆಗುವ ರೀತಿಯ ಬಗ್ಗೆ ವಿವರಿಸುತ್ತಾರೆ. ಆದರೆ ಕೆಲವು ಪ್ರಾಣಿಗಳು ತಾಯಿಯಾಗಲು ಮಾಡುವ ತ್ಯಾಗವು ಬಹು ದೊಡ್ಡದು ಎಂದು ವಿವರಿಸಿದ್ದಾರೆ.

## ರಾಕ್ಷರಂತೆ ತಿನ್ನುವ ಸಮುದ್ರನಾಯಿ

ಸಮುದ್ರನಾಯಿಗಳು ಮರಿಯಾಕುವ ಸಮಯದಲ್ಲಿ ತಮ್ಮ ದೇಹ ತೂಕದ 20 ರಿಂದ 25 % ರಷ್ಟು ಆಹಾರವನ್ನು ಪ್ರತಿ ದಿನ ತಿನ್ನುತ್ತವೆ. ಇವು ಮರಿಗಾಳನ್ನು ಸಾಕುವ ಸಮಯದಲ್ಲಿ ಇದಕ್ಕಿಂತ ಹೆಚ್ಚು ಆಹಾರವನ್ನು ತಿನ್ನಬೇಕಾಗುತ್ತದೆ. ಒಂದು ಬಾರಿಗೆ ಎರಡರಿಂದ ಮೂರು ಮರಿ ಹಾಕುವ ಸಮುದ್ರ ನಾಯಿ ಆಹಾರಕ್ಕಾಗಿ ಬಹಳ ಪರಿಪಾಟಲು ಪಡುತ್ತದೆ. ಇಷ್ಟೂ ಸಾಲದಕ್ಕೆ ಕೆಲವು ಬಾರಿ ತಾಯಿಯ ಆಹಾರವನ್ನೇ ಮರಿಗಳು ಕಸಿದುಕೊಂಡು ತಿನ್ನುತ್ತವೆ .

## ಹಸಿವಿನ ತಲ್ಲಣಿಸದ ತಾಯಿ ಹಿಮಕರಡಿ

ಹಿಮಕರಡಿಗಳು ತನ್ನ ಮಗುವಿಗೆ ಜನ್ಮ ನೀಡುವ ಎರಡು ತಿಂಗಳ ಮುಂಚೆ ಹಿಮ ಗುಹೆಗೆ ಸೇರಿ ಸುಮಾರು ನಾಲ್ಕರಿಂದ ಆರು ತಿಂಗಳು ಗುಹೆಯಲ್ಲಿಯೇ ಕಾಲ ಕಳೆಯುತ್ತದೆ. ಈ ಸಮಯದಲ್ಲಿ ತಾಯಿ ಹಿಮಕರಡಿಗಳು ಯಾವುದೆ ತರಹದ ಆಹಾರವನ್ನು ಸೇವಿಸದೆ ಉಪವಾಸದಿಂದ ಅಲ್ಲಿಯೇ ತನ್ನ ಮರಿಗಳ ಪೋಷಣೆ ಮೂಲಕ ತನ್ನ ಮರಿಗಳಿಗೆ ಹಾಲನ್ನು ಕೊಡುತ್ತಾ ಮರಿಗಳನ್ನು ಪೋಷಿಸುತ್ತದೆ. ಒಮ್ಮೆ ಮರಿಗಳು ತನ್ನ ನಡಿಗೆಯನ್ನು ಪ್ರಾರಂಬಿಸಿದ ನಂತರ ತಾಯಿ ಹಿಮಕರಡಿಗಳು ತನ್ನ ಮರಿಗಳನ್ನು ಸಮುದ್ರಕ್ಕೆ ಇಳಿ ಬಿಡುತ್ತದೆ ಏಕೆಂದರೆ ತಮ್ಮ ಆಹಾರವನ್ನು ತಾವೆ ಪಡೆದುಕೊಳ್ಳಲಿ ಎಂದು .



## ಹಿಕ್ಕೆಯಿಂದಲೇ ಗೋಡೆ ಕಟ್ಟಿಕೊಂಡು ಬಂಧಿಯಾಗುವ ಮಂಗಟ್ಟೆ ಹಕ್ಕಿ (ಹಾರ್ನ್ ಬಿಲ್)

ಏಷೀಯಾದ ಹಾರ್ನ್ ಬಿಲ್ ಗಳು ತಮ್ಮ ಗೂಡನ್ನು ಎತ್ತರದ ಮರದ ಪೊಟರೆಗಳಲ್ಲಿ ಕಟ್ಟುತ್ತವೆ . ಮರಿಗಳನ್ನು ಶತೃಗಳಿಂದ ರಕ್ಷಿಸಲು ಅವು ತಮ್ಮ ಗೂಡಿನ ದ್ವಾರಗಳನ್ನು ತಮ್ಮ ಹಿಕ್ಕೆ ಮತ್ತು ಮಣ್ಣಿನಿಂದ ಮುಚ್ಚು ತ್ತದೆ . ಕಾವು ಕೊಡುತ್ತಾ ಗೂಡಿನ ಹೊಳಗೆ ಕುಳಿತ ಹೆಣ್ಣು ಹಕ್ಕಿಗೆ ಆಹಾರವನ್ನು ಕೊಡಲು ಸಣ್ಣ ರಂದ್ರವನ್ನು ಬಿಟ್ಟಿರುತ್ತದೆ . ಹೀಗೆ ಗೂಡಿನಲ್ಲಿ ಬಂದಿಯಾದ ಕಾವು ಕೊಡುತ್ತಾ ಕುಳಿತ ಹೆಣ್ಣು ಹಕ್ಕಿಗೆ ಗಂಡು ಹಕ್ಕಿಯೇ ಆಹಾರ ಪೂರೈಸುತ್ತದೆ. ಇದು ಸುಮಾರು ನಾಲ್ಕು ತಿಂಗಳುಗಳು ನಡೆಯುತ್ತವೆ .ಇದಾದ ನಂತರ ಮರಿ ಮತ್ತು ಅಮ್ಮ ಗೂಡಿನಿಂದ ಹೊರ ಬರುತ್ತವೆ.

## ತಾಯಿಗೆ ರಾತ್ರಿ ನಿದ್ರೆ ಇಲ್ಲ!

ರಾತ್ರಿವೇಳೆ ಅತ್ತು ತಾಯಿಯನ್ನು ಎಚ್ಚರಿಸುವ ಹಸುಗೂಸುಗಳು ತಾಯಿಗೆ ನಿದ್ರೆ ಕೊಡವು.

ಡಾಲ್ಫಿನ್ ಗಳಲ್ಲೂ ಸಹ ಮರಿಯಾಕುವ ಸಮಯದಲ್ಲಿ ತಾಯಿ ಡಾಲ್ಫಿನ್ ಗಳು ನಿದ್ದೆ ಮಾಡುವುದೇ ಇಲ್ಲ . ಜನಿಸಿದ ಒಂದು ವಾರದ ವರಿಗೂ ಡಾಲ್ಫಿನ್ ಮರಿಗಳು ನಿದ್ದೆ ಮಾಡುವುದಿಲ್ಲ ಎಂದರೆ ತಾಯಿಗೂ ನಿದ್ದೆ ಇಲ್ಲ!

- ರವಿಚಂದ್ರ .ಎಸ್.ವಿ

## ಓ ನನ್ನ ಪುಟ್ಟ ಗುಬ್ಬಿ



ಓ ನನ್ನ ಪುಟ್ಟ ಗುಬ್ಬಿ
ಹಾರಿ ಹಾರಿ ಬಾ
ಪುಟ್ಟದೊಂದು ಗೂಡು ಕೊಡುವೆ
ಬೇಗ ಬೇಗ ಬಾ

ಚಂದದೊಂದು ಸೂರು ಇದೆ
ಹಿತ್ತಲಲ್ಲಿ ನೀರು ಇದೆ
ಸುತ್ತ ಮುತ್ತ ಮರಗಳಿವೆ
ಬೇಗ ಬೇಗ ಬಾ.

ನಮ್ಮ ಮನೆಯಲ್ಲೊಂದು
ನಿಮಗೆ ಪುಟ್ಟ ಗೂಡ ನೀಡುವೆ
ಜೊತೆಗೆ ಭತ್ತ –ಕಾಳು ಕೊಡುವೆ
ಒಮ್ಮೆ ಚೀವ್ ಚೀವ್ ಹಾಡು ಬಾ

ಕಿಟಕಿಯಲ್ಲೇ ಏಕೆ ಕುಳಿತೆ
ಒಳಗೆ ಬಾ ಧೈರ್ಯದಿಂದ
ನಿನ್ನ ಮನೆಯೆಂದು
ಹಾರಿ ಹಾರಿ ಬಾ

ಪುಟ್ಟ ಮನೆಯ ಗೂಡು ಮಾಡಿ
ಗೂಡಲ್ಲೊಂದು ಮೊಟ್ಟೆ ಇಟ್ಟು
ಮರಿಯಮಾಡಿ ಲಾಲಿಹಾಡಿ
ಸಂತಸದಿ ನಿನ್ನ ಸಂತತಿ ಸಾಸಿರವಾಗಲಿ ಬಾ

– ಶಂಕರಪ್ಪ .ಕೆ.ಪಿ






ಮರದಲ್ಲಿ ಅರಳಿದ ಪರಿಪೂರ್ಣತೆ




ಏರೋಪ್ಲೇನ್ ಚಿಟ್ಟೆ